ತುರುವೇಕೆರೆ ತಾಲ್ಲೂಕನ್ನು ಕಪ್ಪು ಪ್ರದೇಶ ಪಟ್ಟಿಯಿಂದ ಬಿಡುಗಡೆ ಮಾಡುವುದು

820 (842) ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ತುರುವೇಕೆರೆ) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕನ್ನು ಕಪ್ಪುಪ್ರದೇಶ ಎಂದು ಪಟ್ಟಿ ಮಾಡಲಾಗಿದೆಯೇ;

ಆ) ಹಾಗಿದ್ದಲ್ಲಿ, ಕಾರಣಗಳೇನು;

ಇ) ಈಗ ಹೇಮಾವತಿ ನೀರು ಹರಿಯುತ್ತಿದ್ದು ತಾಲ್ಲೂಕು ಜಲ ಸಮೃದ್ಧವಾಗಿರುವ ಹಿನ್ನೆಲೆಯಲ್ಲಿ ತಾಲ್ಲೂಕನ್ನು ಕಪ್ಪು ಪ್ರದೇಶದಿಂದ ಬಿಡುಗಡೆ ಮಾಡುವ ಬಗ್ಗೆ ಸರ್ಕಾರದ ನಿಲುವೇನು;

ಈ) ಎಷ್ಟು ದಿನಗಳಲ್ಲಿ ಬಿಡುಗಡೆ ಮಾಡಲಾಗುವುದು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಸಚಿವರು) :

ಅ) ಹೌದು

ಆ) ತುರುವೇಕೆರೆ ತಾಲ್ಲೂಕಿನಾದ್ಯಂತ ನೀರಾವರಿಗಾಗಿ ಆಳದ ಕೊಳವೆ ಬಾವಿಗಳನ್ನು ಮನಸ್ಸಿಗೆ ಬಂದಂತೆ ಎಲ್ಲೆಂದರಲ್ಲಿ ಕೊರೆದು ಭೂಮಿಯಲ್ಲಿ ಲಭ್ಯವಿರುವ ಜಲ ಭಂಡಾರವನ್ನು ಕೊಳವೆ ಬಾವಿಗಳ ಮೂಲಕ ಶೇಕಡಾ 85ಕ್ಕಿಂತಲೂ ಹೆಚ್ಚಿಗೆ ಬಳಕೆ ಆಡಿರುವುದರಿಂದ ತಾಲ್ಲೂಕಿನಲ್ಲಿ ಜನಮಟ್ಟವು ಕುಸಿಯುವುದಕ್ಕೆ ಕಾರಣವಾಗಿದೆ. ಆದ್ದರಿಂದ ಸದರಿ ತಾಲ್ಲೂಕನ್ನು 'ಕಪ್ಪು' ಪ್ರದೇಶವೆಂದು ನಬಾರ್ಡ್ ಸಂಸ್ಥೆಯವರು ವರ್ಗೀಕರಣ ಮಾಡಿರುತ್ತಾರೆ.

ಇ) 1994ರ ಅಂತ್ಯಕ್ಕೆ ಅಂತರ್ಜಲ ಸ್ಥಿತಿಗತಿಯ ಮೌಲೀಕರಣ ಮಾಡಲಾದ ವರದಿಯ ಪ್ರಕಾರ ಆ ತಾಲ್ಲೂಕನ್ನು ಕಪ್ಪು ಪ್ರದೇಶವೆಂದು ವರ್ಗೀಕರಣ ಮಾಡಲಾಗಿತ್ತು. ಆದರೆ, ಅಂತರ್ಜಲ ಮೌಲೀಕರಣ ಸಮಿತಿಯು ಸೂಚಿಸಿದಂತೆ, ಇಲಾಖೆಯು 1999 ಡಿಸೆಂಬರ್ ಅಂತ್ಯಕ್ಕೆ ಈಗಿನ ಮಾಹಿತಿಯಂತೆ ಪುನರ್ ಮೌಲೀಕರಣ ಮಾಡಲಾಗುವುದು.

ಈ) ಅಂತರ್ಜಲ ಸ್ಥಿತಿಗತಿಯ ಬಗ್ಗೆ ಜಲಾನಯನವಾರು ಲೆಕ್ಕಾಚಾರ ಮಾಡಿ ವರದಿಯನ್ನು ನಬಾರ್ಡ್ ಸಂಸ್ಥೆಗೆ 2001ನೇ ಸಾಲಿನ ಮಾರ್ಚ್/ಎಪ್ರಿಲ್ ತಿಂಗಳಿನಲ್ಲಿ ಸಲ್ಲಿಸಲಾಗುವುದು. ಸದರಿ ವರದಿಯನ್ನು ಆ ಸಂಸ್ಥೆಯು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಅಂತಿಮ ವರದಿಯನ್ನು ಪ್ರಕಟಿಸಲಾಗುವುದು.

ತುರುವೇಕೆರೆ ಪಟ್ಟಣದಲ್ಲಿ ಒಳಚರಂಡಿ ಕಾಮಗಾರಿ

821 (1064) ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ತುರುವೇಕೆರೆ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ಪಟ್ಟಣದಲ್ಲಿ ಯಡಿಯೂರು-ತಿಪಟೂರು ರಸ್ತೆಗೂ ಎರಡು ಕಡೆಯಲ್ಲಿ ಒಳಚರಂಡಿ ಮಾಡಿದ ರಸ್ತೆ ಮೇಲೆ ನೀರು ಹರಿದು ರಸ್ತೆಗಳು ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;